ಪಡೆ ಮತ್ತು ಜಾಗೃತಿದಳದ ಅನಧಿಕೃತ ಕಟ್ಟಡಗಳ ನೆಲಸಮ ಮಾಡುವ ಕೆಲಸದಲ್ಲಿ ನಿರ್ಬಂಧವನ್ನು ಒಡ್ಡಿವೆ. ಬೆಂಗಳೂರಿನ ಸುತ್ತಮುತ್ತ ನೆಲಗಳ್ಳರ ಮತ್ತು ಅನಧಿಕೃತವಾಗಿ ಕಟ್ಟುವ ಸಂಖ್ಯೆ ಹೆಚ್ಚುತ್ತಿರುವುದಕ್ಕೆ ಸಂಪನ್ಮೂಲದ ಕೊರತೆ ಇರುವುದು ಜಾಗೃತಿದಳದ ಕೆಲಸವನ್ನು ಮತ್ತಷ್ಟು ಜಟಿಲಗೊಳಿಸಿದೆ.

ಆ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಸೇರಿದ ಜಮೀನುಗಳ ಮೇಲೆ ಸುಮಾರು 9,700 ಅನಧಿಕೃತ ಕಟ್ಟಡಗಳು ಇರುವುದಾಗಿ ಅಂದಾಜು ಮಾಡಲಾಗಿದೆ.

ವಿಷಯ: ಪರಿಶಿಷ್ಟ ಜಾತಿ ಮತ್ತು ವರ್ಗದ ಜನರ ಮೇಲಾಗಿರುವ ದೌರ್ಜನ್ಯಗಳು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1640 (1065)

ಶ್ರೀ ವೈ. ರಾಮಕೃಷ್ಣ (ಆನೇಕಲ್): ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1-1-95ರಿಂದ 31-7-95ರವರೆವಿಗೆ ಕರ್ನಾಟಕ ರಾಜ್ಯದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಜನರ ಮೇಲೆ ನಡೆದಿರುವ ಖೂನಿಗಳೆಷ್ಟು; ಸತ್ತವರ ಸಂಖ್ಯೆ ಎಷ್ಟು; ಈ ಪೈಕಿ ಘಟನೆಗಳು ನಡೆದ ಸ್ಥಳದಲ್ಲೇ ಸತ್ತವರೆಷ್ಟು; ಆಸ್ಪತ್ರೆಗಳಲ್ಲಿ ಸತ್ತವರ ಸಂಖ್ಯೆ ಎಷ್ಟೆಷ್ಟು (ಜಿಲ್ಲಾವಾರು ಸಂಖ್ಯೆ ಒದಗಿಸುವುದು)

ಆ) ದೌರ್ಜನ್ಯಗಳ ಸಂಖ್ಯೆ ಎಷ್ಟು (ಜಿಲ್ಲಾವಾರು ಸಂಖ್ಯೆಯನ್ನು ಕೊಡುವುದು);

ಇ) ಹೆಚ್ಚಿನ ಏಟುಗಳಿಂದಾದ ಕೈಕಾಲು ಮುರಿತ ಮತ್ತು ತಲೆಗೆ ಪೆಟ್ಟು ಬಿದ್ದವರ ಸಂಖ್ಯೆ ಎಷ್ಟು;

ಈ) ಪರಿಶಿಷ್ಟ ಜಾತಿ ಹಾಗೂ ವರ್ಗಗಳ ಮಹಿಳೆಯರ ಮೇಲೆ ಆದ ಅತ್ಯಾಚಾರಗಳೆಷ್ಟು (ಜಿಲ್ಲಾವಾರು ಸಂಖ್ಯೆ ಕೊಡಿ)

ಉ) ರಾಜ್ಯದಲ್ಲಿ ಯಾವ ಊರುಗಳಲ್ಲಿ ಪರಿಶಿಷ್ಟ ಜಾತಿ ಹಾಗೂ ವರ್ಗದ ಜನರ ಮೇಲೆ ಬಹಿಷ್ಕಾರವನ್ನು ಬೇರೆಯವರು ಹಾಕಿದ್ದರು; ಈ ಬಹಿಷ್ಕಾರ ಎಷ್ಟೆಷ್ಟು ದಿವಸಗಳು ಮುಂದುವರೆದವು; ಈ ರೀತಿ ಬಹಿಷ್ಕಾರ ಹಾಕಿದವರ ಮೇಲೆ ಸರ್ಕಾರ ಕೈಗೊಂಡ ಕ್ರಮಗಳೇನು?

ಊ) ಈ ಪರಿಶಿಷ್ಟ ಜಾತಿ ಮತ್ತು ವರ್ಗಗಳ ಜನರ ಮೇಲೆ ನಡೆದ ಹಲ್ಲೆಗಳೆಷ್ಟು;

ಋ) ಪಿ.ಪಿ.ಆರ್. ಆಕ್ಟ್‌ನ ಮೇರೆಗೆ ಈ ಜನರಿಂದ ಬಂದ ಅರ್ಜಿಗಳೆಷ್ಟು; ಸಿ.ಆರ್.ಇ. ಸೆಲ್‌ಗೆ ಆ ಅರ್ಜಿಗಳ ಮೇಲೆ ತೆಗೆದುಕೊಂಡ ಕ್ರಮಗಳೇನು; ಜಿಲ್ಲಾವಾರು ಅಂಕಿ ಅಂಶಗಳನ್ನು ಕೊಡಿ;

ಋ) ರಾಜ್ಯದಲ್ಲಿ ಸತ್ತವರ ದೌರ್ಜನ್ಯಕ್ಕೊಳಗಾದವರಿಗೆ ಗಿವಿಯನ್ ಹರ್ಟ್‌ನಲ್ಲಿ ನೊಂದವರಿಗೆ ಅತ್ಯಾಚಾರದಲ್ಲಿ ನೊಂದ ಮಹಿಳೆಯರಿಗೆ, ಬಹಿಷ್ಕಾರದಲ್ಲಿ ಬೆಂದವರಿಗೆ ಸರ್ಕಾರ ಕೊಟ್ಟಿರುವ ಪರಿಹಾರ ಎಷ್ಟೆಷ್ಟು ತಿಳಿಸಿರಿ;

ಎ) ರಾಜ್ಯದಲ್ಲಿ ದೀನ ದಲಿತರಿಗೆ ಸೇರಿದ ಮನೆಗಳಿಗೆ ಬೆಂಕಿ ಬಿದ್ದ ಪ್ರಕರಣಗಳೆಷ್ಟು (ಜಿಲ್ಲಾವಾರು ವಿವರ ಒದಗಿಸುವುದು)

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಗೃಹ ಸಚಿವರು):

ಅ) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಜನರ ಮೇಲೆ ನಡೆದ ಖೂನಿಗಳ ವಿವರ ಈ ಕೆಳಕಂಡಂತೆ ಇದೆ.

ಸತ್ತವರ ಸಂಖ್ಯೆ ---------- 39
ಘಟನೆ ನಡೆದ ಸ್ಥಳದಲ್ಲಿ ಸತ್ತವರ ಸಂಖ್ಯೆ -- 20
ಆಸ್ಪತ್ರೆಯಲ್ಲಿ ಸತ್ತವರ ಸಂಖ್ಯೆ ---------- 6
ಜಿಲ್ಲಾವಾರು ವಿವರಗಳಿರುವ ಅನುಬಂಧ - 'ಅ' ಲಗತ್ತಿಸಿದೆ.

ಆ) 557, ಜಿಲ್ಲಾವಾರು ವಿವರಗಳಿರುವ ಅನುಬಂಧ - ಆ ಲಗತ್ತಿಸಿದೆ.

ಇ) ತಲೆಗೆ ಪೆಟ್ಟುಬಿದ್ದವರ ಸಂಖ್ಯೆ : 56
ಕೈಕಾಲು ಮುರಿತ : 9

ಈ) 22, ಜಿಲ್ಲಾವಾರು ವಿವರಗಳಿರುವ ಅನುಬಂಧ - ಇ ಲಗತ್ತಿಸಿದೆ.

ಉ) ವಿವರಗಳಿರುವ ಅನುಬಂಧ - 'ಈ' ಲಗತ್ತಿಸಿದೆ.

ಊ) 557

ಋ) 156, ವಿವರಗಳಿರುವ ಅನುಬಂಧ -'ಉ' ಲಗತ್ತಿಸಿದೆ.

ಋೂ) ರೂ. 12.11,155-00

ಎ) 14, ಜಿಲ್ಲಾವಾರು ವಿವರಗಳಿರುವ ಅನುಬಂಧ 'ಅ' ಲಗತ್ತಿಸಿದೆ.

ಅನುಬಂಧ - ಅ

ಜಿಲ್ಲೆಗಳ ಹೆಸರು	ಸತ್ತವರ ಸಂಖ್ಯೆ		ಸ್ಥಳದಲ್ಲಿ ಸತ್ತವರು	ಆಸ್ಪತ್ರೆಯಲ್ಲಿ ಸತ್ತವರು	ತಲೆಗೆ ಪೆಟ್ಟು	ಕೈ ಕಾಲು ಮುರಿತ	ಅತ್ಯಾಚಾರ	ಹಲ್ಲೆ	ಬೆಂಕಿ ಬಿದ್ದ ಪ್ರಕರಣ	ಪರಿಹಾರ ರೂ.
	ಎಸ್.ಸಿ	ಎಸ್.ಟಿ.								
1	2		3	4	5	6	7	8	9	10
ಬೆಂಗಳೂರು ಜಿಲ್ಲೆ	1	-	1	-	-	-	-	47	3	-
ಬಳ್ಳಾರಿ	-	-	-	-	-	-	-	11	-	-
ಬಿಜಾಪುರ	2	-	1	1	6	-	-	99	2	1,15,000-00
ಬೀದರ್	1	-	1	-	-	-	2	14	-	-
ಚಿಕ್ಕಮಗಳೂರು	1	-	1	-	-	-	1	34	-	15,000-00
ಚಿತ್ರದುರ್ಗ	-	2	2	-	-	-	3	29	-	1,44,000-00
ಧಾರವಾಡ	2	-	2	-	1	-	1	28	2	-
ದಕ್ಷಿಣ ಕನ್ನಡ	1	-	1	-	-	-	1	7	2	2,50,000-00
ಗುಲ್ಬರ್ಗ	-	-	-	-	-	-	-	-	3	-
ಹಾಸನ	1	-	-	1	-	-	1	8	-	1,00,000-00
ಕೆ.ಜಿ.ಎಫ್	-	-	-	-	-	-	1	-	-	-
ಕೊಡಗು	-	2	1	1	-	-	1	3	-	-
ಮೈಸೂರು ನಗರ	-	-	-	-	-	-	1	-	-	-
ರಾಯಚೂರು	3	-	3	-	-	-	2	21	-	-
ಶಿವಮೊಗ್ಗ	-	-	-	-	-	-	1	10	-	8,156-00
ತುಮಕೂರು	-	-	-	-	2	-	-	70	1	1,50,000-00
ಉತ್ತರ ಕನ್ನಡ	1	-	1	-	-	-	-	1	-	-

1	2		3	4	5	6	7	8	9	10
ಕೋಲಾರ	4	-	2	1	34	8	3	44	-	4, 10, 599-00
ಮೈಸೂರು	2	-	2	-	-	-	-	40	1	12, 500-00
ಮಂಡ್ಯ	2	-	1	1	9	-	-	12	-	6,000-00
ಬೆಂಗಳೂರು ನಗರ	1	-	-	1	-	-	1	9	-	-
ಹುಬ್ಬಳ್ಳಿ ಧಾರವಾಡ ನಗರ	1	-	1	-	3	-	-	10	-	-
ಬೆಳಗಾಂ	12	-	-	-	1	1	-	40	-	-
ಒಟ್ಟು	35	4	20	6	56	9	22	557	14	12, 11, 255-00

ಅನುಬಂಧ - ಆ

ಬಳ್ಳಾರಿ ಜಿಲ್ಲೆ ಭೀಮಸಮುದ್ರ ಗ್ರಾಮ, ಹೊಸಹಳ್ಳಿ ಪೋಲೀಸ್ ಠಾಣೆ ಸರಹದ್ದಿನಲ್ಲಿ 16 ದಿವಸಗಳ ಕಾಲ ಹರಿಜನರಿಗೆ ಬಹಿಷ್ಕಾರ ಹಾಕಿದ್ದರ ಹಿನ್ನೆಲೆಯಲ್ಲಿ ಹೊಸಹಳ್ಳಿ ಪೋಲೀಸ್ ಠಾಣೆ ಕ್ರೈಂ ಸಂಖ್ಯೆ: 86:95ರಲ್ಲಿ ಕಲಂ 3(ಎ) 4(1)(2)(4) 6, 7 ಕ್ಲಾಸ್ (1)(ಎ) ಪಿಸಿಆರ್ ಕಾಯ್ದೆ 3 ಮತ್ತು 9 ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ದೌರ್ಜನ್ಯ ತಡೆ ಕಾಯಿದೆ ಹಾಗೂ 506 ಭಾ.ದಂ.ಸಂಹಿತೆಯ ಪ್ರಕಾರ ಕೇಸು ದಾಖಲಾಗಿರುತ್ತದೆ.

ಚಿಕ್ಕಮಗಳೂರು ಗ್ರಾಮಾಂತರ ಪೋಲೀಸ್ ಠಾಣೆ ವ್ಯಾಪ್ತಿಯಲ್ಲಿ ಬರುವ ಅಂಬಳೆ ಗ್ರಾಮದಲ್ಲಿ ಮುತ್ತಿನಮ್ಮ ದೇವತೆಯ ಜಾತ್ರೆ ಸಮಯದಲ್ಲಿ ಸವರ್ಣೀಯರಿಗೂ ಮತ್ತು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೂ ಗಲಾಟೆಗಳು ನಡೆದು ಸವರ್ಣೀಯರು ಕಾನೂನು ಬಾಹಿರ ಸಭೆ ಸೇರಿ ಹರಿಜನರ ಮನೆಗಳ ಮೇಲೆ ಕಲ್ಲು ತೂರಿ, ಮನೆಗಳನ್ನು ನಾಶಪಡಿಸಿ, ಆಹಾರ ಸಾಮಗ್ರಿಗಳನ್ನು ಸಹ ನಾಶಪಡಿಸಿದ್ದು, ಅಲ್ಲದೆ ಹರಿಜನರಿಗೆ ಗಾಯಗಳನ್ನುಂಟು ಮಾಡಿದ್ದಾರೆ. ತದನಂತರ ದಿ: 14-4-95ರಿಂದ 1-5-95ರವರೆಗೆ ಹರಿಜನರನ್ನು ಹೋಟೆಲ್ ಮತ್ತು ಅಂಗಡಿಗಳಿಗೆ ಮತ್ತು ಮಿಲ್ಲುಗಳಿಗೆ ಬಾರದಂತೆ ಬಹಿಷ್ಕಾರ ಹಾಕಿದ್ದು, ಈ ಬಗ್ಗೆ ಚಿಕ್ಕಮಗಳೂರು ಗ್ರಾಮಾಂತರ ಪೋಲೀಸ್ ಠಾಣೆ ಕ್ರೈಂ ಸಂಖ್ಯೆ:250:95ರಲ್ಲಿ ಕಲಂ 143- 147- 148- 324- 504- 506- 427- 353- 332- 395 ರೆ:ವಿ 149 ಐ.ಪಿ.ಸಿ. ಮತ್ತು 3 ಕ್ಲಾಸ್ (10) ಎಸ್.ಸಿ: ಎಸ್.ಟಿ ಕಾಯ್ದೆ ಪ್ರಕಾರ ಕೇಸು ದಾಖಲು ಮಾಡಿರುತ್ತಾರೆ. ಮತ್ತು ಕೇಸು ತನಿಖೆಯ ಹಂತದಲ್ಲಿರುತ್ತದೆ.

ಈ ಬಗ್ಗೆ ಸಂಬಂಧಪಟ್ಟ ಪೋಲೀಸ್ ಠಾಣೆಯವರು ಸೂಕ್ತ ಕಾನೂನು ಬಂದೋ ಬಸ್ತ್ ಮಾಡಿದ್ದು, ಗ್ರಾಮದಲ್ಲಿ ಶಾಂತಿ ನೆಲೆಸುವಂತೆ ಮಾಡುವಲ್ಲಿ ಯಶಸ್ವಿಯಾಗಿದ್ದು ಸದ್ಯಕ್ಕೆ ಯಾವ ತರಹದ ಗಲಾಟೆ ವಗೈರೆಗಳು ಇರುವುದಿಲ್ಲ; ಪರಿಸ್ಥಿತಿ ಶಾಂತವಾಗಿರುತ್ತದೆ.

ಅನುಬಂಧ - ಇ

ಪಿ.ಸಿ.ಆರ್. ಕಾಯ್ದೆ ಮೇರೆಗೆ ವರದಿಯಾಗಿರುವ ಪ್ರಕರಣಗಳು ಹಾಗೂ ಅವುಗಳ ಬಗ್ಗೆ ತೆಗೆದುಕೊಂಡಿರುವ ಕ್ರಮಗಳ ವಿವರ.

ಜಿಲ್ಲೆಗಳ ಹೆಸರು	ವರದಿಯಾಗಿರುವ ಪ್ರಕರಣಗಳು	ಸುಳ್ಳು ಪ್ರಕರಣಗಳು	ನಿಜವಾದ ಪ್ರಕರಣಗಳು	ನ್ಯಾಯಾಲಯದಲ್ಲಿ ಬಾಕಿ ಇರುವ ಪ್ರಕರಣಗಳು	ತನಿಖೆಯಲ್ಲಿರುವ ಪ್ರಕರಣಗಳು	ಶಿಕ್ಷೆಗೊಳಪಟ್ಟ ಪ್ರಕರಣಗಳು	ಇತರೆ ವಿಲೇ ಪ್ರಕರಣಗಳು	'ಬಿ' ಮತ್ತು 'ಸಿ' ವರದಿ ಸಲ್ಲಿಸಿರುವ ಪ್ರಕರಣಗಳು
ಬೆಂಗಳೂರು ನಗರ	21	2	19	8	10	1	-	-
ಬೆಂಗಳೂರು ಜಿಲ್ಲೆ	31	2	29	7	22	-	-	-
ಬೆಳಗಾಂ	4	-	4	2	2	-	-	-
ಬಳ್ಳಾರಿ	13	-	13	3	10	-	-	-
ಬಿಜಾಪುರ	2	2	-	-	-	-	-	-
ಬೀದರ್	-	-	-	-	-	-	-	-
ಚಿಕ್ಕಮಗಳೂರು	8	3	5	4	1	-	-	-
ಚಿತ್ರದುರ್ಗ	10	-	10	4	6	-	-	-
ಧಾರವಾಡ	3	-	3	2	1	-	-	-
ದಕ್ಷಿಣ ಕನ್ನಡ	-	-	-	-	-	-	-	-
ಗುಲ್ಬರ್ಗಾ	27	-	27	12	14	-	-	1
ಹಾಸನ	-	-	-	-	-	-	-	-
ಹುಬ್ಬಳ್ಳಿ - ಧಾರವಾಡ	18	2	16	10	4	-	-	2
ಕೋಲಾರ	6	1	5	3	2	-	-	-

ಜಿಲ್ಲೆಗಳ ಹೆಸರು	ವರದಿಯಾಗಿರುವ ಪ್ರಕರಣಗಳು	ಸುಳ್ಳು ಪ್ರಕರಣಗಳು	ನಿಜವಾದ ಪ್ರಕರಣಗಳು	ನ್ಯಾಯಾಲಯದಲ್ಲಿ ಬಾಕಿ ಇರುವ ಪ್ರಕರಣಗಳು	ತನಿಖೆಯಲ್ಲಿರುವ ಪ್ರಕರಣಗಳು	ಶಿಕ್ಷೆಗೊಳಪಟ್ಟ ಪ್ರಕರಣಗಳು	ಇತರೆ ವಿಲೇ ಪ್ರಕರಣಗಳು	'ಬಿ' ಮತ್ತು 'ಸಿ' ವರದಿ ಸಲ್ಲಿಸಿರುವ ಪ್ರಕರಣಗಳು
ಕೆ.ಜಿ.ಎಫ್.	1	-	1	1	-	-	-	-
ಕೊಡಗು	-	-	-	-	-	-	-	-
ಮಂಡ್ಯ	1	-	1	1	-	-	-	-
ಮೈಸೂರು ಜಿಲ್ಲೆ	13	-	13	3	9	-	1	-
ಮೈಸೂರು ನಗರ	1	-	1	-	1	-	-	-
ರಾಯಚೂರು	-	-	-	-	-	-	-	-
ಶಿವಮೊಗ್ಗ	3	-	3	3	-	-	-	-
ತುಮಕೂರು	6	-	6	4	2	-	-	-
ಉತ್ತರ ಕನ್ನಡ	-	-	-	-	-	-	-	-
ಒಟ್ಟು	108	12	156	67	84	1	1	3